ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್–13/ 88/ 2021–22 ದಿನಾಂಕ: 17.08.2021

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 13.08.2021 ರಂದು ಜರುಗಿದ ಸಿಂಡಿಕೇಟ್ 13 ನೇ ಸಾಮಾನ್ಯ ಸಭೆಯ ನಡವಳಿಗಳು.**

***

ದಿನಾಂಕ: **13.08.2021** ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟ್ 13 ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್–13/ಸಾಮಾನ್ಯ ಸಭೆ/ ೩೪ /2021–22 ದಿನಾಂಕ: 17.08.2021

ದಿನಾಂಕ 13.08.2021 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 13 ನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ,<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ.ವಿ.ಆರ್. ದೇವರಾಜ್, | ಸದಸ್ಯರು |
| 3. | ಪ್ರೊ. ಕೆ. ರಮೇಶ್ | ಸದಸ್ಯರು |
| 4. | ಡಾ: ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 5. | ಡಾ. ಪಿ. ವಿ. ಪದ್ಮಜಾ | ಸದಸ್ಯರು |
| 6. | ಪ್ರೊ. ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 7. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 8. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 9. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 10. | ಡಾ. ಆರ್.ಕೆ. ಚಂದ್ರನಾಥ್ | ಸದಸ್ಯರು |
| 11. | ಡಾ. ವಿ. ಗಾಯತ್ರಿ | ಸದಸ್ಯರು |
| 12. | ಪ್ರೊ. ಬಿ. ರಮೇಶ್,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 13. | ಶ್ರೀ.ಸಿ.ಎನ್. ಶ್ರೀಧರ,ಕೆ.ಎ.ಎಸ್. (ಹಿರಿಯ ಶ್ರೇಣಿ)<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕುಲಪತಿಗಳು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಸ್ವಾಗತ ಕೋರಿದರು. ವಿಶ್ವವಿದ್ಯಾನಿಲಯದ ಕುಲಸಚಿವರು (ಆಡಳಿತ) ಹುದ್ದೆಗೆ, ಕೆ.ಎ.ಎಸ್.(ಹಿರಿಯ ಶ್ರೇಣಿ) ಅಧಿಕಾರಿಗಳಾದ ಶ್ರೀ. ಸಿ.ಎನ್. ಶ್ರೀಧರ ರವರನ್ನು, ಸರ್ಕಾರ ನೇಮಕ ಮಾಡಿದ್ದು ಅವರು ದಿನಾಂಕ 06.07.2021 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದನ್ನು ಸಭೆಗೆ ತಿಳಿಸಿ ಅವರಿಗೆ ಸ್ವಾಗತ ಕೋರಿದರು. ವಿಜ್ಞಾನ ನಿಕಾಯದ ಡೀನರಾದ, ಡಾ.ವಿ.ಆರ್. ದೇವರಾಜ್, ರವರನ್ನು ಹಿರಿಯ ಡೀನರಾಗಿ ಸಿಂಡಿಕೇಟ್ ಪ್ರಾಧಿಕಾರಕ್ಕೆ ದಿನಾಂಕ 22.06.2021 ರಂದು ನಾಮಕರಣ ಮಾಡಿರುವುದನ್ನು ತಿಳಿಸಿ ಅವರಿಗೂ ಸ್ವಾಗತ ಕೋರಿದರು.

ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಪಿ. ಎಲ್. ವೆಂಕಟೇಶಮೂರ್ತಿಯವರು, ದಿನಾಂಕ 31.07.2021 ರಂದು ವಯೋನಿವೃತ್ತಿ ಹೊಂದಿ ಕರ್ತವ್ಯದಿಂದ ಬಿಡುಗಡೆ ಹೊಂದಿರುವ ವಿಷಯವನ್ನು ತಿಳಿಸಿ, ಶ್ರೀಮತಿ ಪಿ. ರಾಧಾ, ಉಪನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನ ಮತ್ತು ಲೆಕ್ಕ ಪತ್ರ ಇಲಾಖೆ ಇವರು ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳಾಗಿ ದಿನಾಂಕ 05.08.2021 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದನ್ನು ಸಭೆಗೆ ತಿಳಿಸಿದರು.

ಸಿಂಡಿಕೇಟ್ ಸದಸ್ಯತ್ವದ ಅವಧಿಯನ್ನು ದಿನಾಂಕ 20.07.2021 ರಂದು ಪೂರ್ಣಗೊಳಿಸಿರುವ ಡಾ. ಹೆಚ್.ಟಿ. ಅರವಿಂದ ಹಾಗೂ ಶ್ರೀ ಹೆಚ್.ಆರ್. ಸತೀಶರವರ ಸೇವೆಯನ್ನು ಸ್ಮರಿಸಿ, ಅವರ ಗೌರವಾರ್ಥ ಇಂದು ಮಧ್ಯಾಹ್ನ 4.00 ಗಂಟೆಗೆ ಸರಳ ಸನ್ಮಾನ ಸಮಾರಂಭ ಆಯೋಜಿಸಿರುವುದನ್ನು ಸಭೆಗೆ ತಿಳಿಸಿ, ಸದಸ್ಯರು ಉಪಸ್ಥಿತರಿರಲು ಕೋರಿದರು.

ಕಾರ್ಯಸೂಚಿಯ ಪ್ರಾರಂಭದ ಪೂರ್ವದಲ್ಲಿ ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದರವರು ಕ್ರಿಯಾಲೋಪ ವ್ಯಕ್ತಪಡಿಸಿ, ಪರಿನಿಯಮಗಳ ಪ್ರಕಾರ ತಿಂಗಳಿಗೆ ಒಂದು ಸಭೆ ಹಾಗೂ ವಿಶ್ವವಿದ್ಯಾನಿಲಯಗಳ ಕಾಯಿದೆ ಪ್ರಕಾರ ವರ್ಷದಲ್ಲಿ ಕನಿಷ್ಠ ಎಂಟು ಸಭೆಗಳನ್ನು ಜರುಗಿಸಬೇಕಾಗಿರುವದನ್ನು ತಿಳಿಸಿ ಅದರ ಪಾಲನೆ ಆಗಿರುವುದಿಲ್ಲವೆಂದು ತಿಳಿಸಿದರು.

ಕುಲಪತಿಗಳು ವಿವರಣೆ ನೀಡಿ, ಕೋವಿಡ್-19 ಹಾಗೂ ತತ್ಸಂಬಂಧದ ಲಾಕ್‌ಡೌನ್ ಇತ್ಯಾದಿ ಕಾರಣಗಳಿಂದ ಮತ್ತು ಕರ್ನಾಟಕರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅನುಚ್ಛೇದ 28(2) ಪ್ರಕಾರ ವರ್ಷದಲ್ಲಿ ಕನಿಷ್ಟ 8 ಸಭೆಗಳನ್ನು ಹಾಗೂ ಎರಡು ಸಭೆಗಳ ಮಧ್ಯ 8 ವಾರಗಳಿಗಿಂತ ಹೆಚ್ಚು ಅವಧಿ ಇರದಂತೆ ನೋಡಿಕೊಳ್ಳಲು ಅವಕಾಶ ಇದೆ, ಅದರಂತೆ ಸಭೆ ಜರುಗಿಸಲಾಗಿದೆ, ಯಾವುದೇ ಕ್ರಿಯಾಲೋಪವಾಗಿಲ್ಲವೆಂದು ತಿಳಿಸಿದರು. ಆದಾಗ್ಯೂ ಸದಸ್ಯರು ವ್ಯಕ್ಯಪಡಿಸಿದ ಭಾವನೆಗಳನ್ನು ಗಮನಿಸಿ ಅಗತ್ಯ ಸಭೆಗಳನ್ನು ಜರುಗಿಸಲಾಗುವುದು ಎಂದು ತಿಳಿಸಿದರು.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 1:** ದಿನಾಂಕ 20.03.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ ಹಾಗೂ ದಿನಾಂಕ 16.06.2021 ರಂದು ಜರುಗಿದ 12ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಧೃಢೀಕರಿಸುವ ಕುರಿತು

**ಸಿಂಡಿಕೇಟ್ ನಿರ್ಣಯ:**

**ದಿನಾಂಕ 20.03.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ ಹಾಗೂ ದಿನಾಂಕ 16.06.2021 ರಂದು ಜರುಗಿದ 12ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಧೃಢೀಕರಿಸಲಾಯಿತು.**

**ವಿಷಯ ಸಂಖ್ಯೆ 2:** ದಿನಾಂಕ 20.03.2021 ರಂದುಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ಹಾಗೂ ದಿನಾಂಕ 16.06.2021 ರಂದು ಜರುಗಿದ 12ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ಸಿಂಡಿಕೇಟ್ ನಿರ್ಣಯ:**

**ದಿನಾಂಕ 20.03.2021 ರಂದುಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆ ಹಾಗೂ ದಿನಾಂಕ 16.06.2021 ರಂದುಜರುಗಿದ 12ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಗಳನ್ನು ಪರಾಮರ್ಶಿಸಿ ಕೆಳಕಂಡ ಸೂಚನೆಗಳೊಂದಿಗೆ ಅನುಮೋದನೆ ನೀಡಲಾಯಿತು.**

ದಿನಾಂಕ 20.03.2021 ರ ಸಿಂಡಿಕೇಟ್ ಸಭೆಯ ಕೈಗೊಂಡ ಕ್ರಮಗಳ ವರದಿಯ ಮೇಲೆ ನೀಡಲಾದ ಸೂಚನೆಗಳು.

**ವಿಷಯ ಸಂಖ್ಯೆ:1 (20.03.2021)-43ನೆಯ ಸಮಾಜ ವಿಜ್ಞಾನ ಕಾಂಗ್ರೆಸ ವಿಚಾರಣಾ ಸಮಿತಿಯ ಅಧ್ಯಕ್ಷರಿಗೆ ಪತ್ರ ಬರೆದು ವರದಿ ಸಲ್ಲಿಸುವಂತೆ ಸೂಚಿಸುವುದು.**

**ವಿಷಯ ಸಂಖ್ಯೆ:2(I)(20.03.2021)- GEM Portal ಮುಖಾಂತರ ಖರೀದಿಸಲಾದ ಗಣಕಯಂತ್ರಗಳ Specification ಪ್ರತಿಯನ್ನು ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದ, ಅವರಿಗೆ ನೀಡುವುದು.**

**ವಿಷಯ ಸಂಖ್ಯೆ:5(20.03.2021)– ಸಂಚಿತ ಸಂಭಾವನೆಯ ಮೇಲೆ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಏಪ್ರಿಲ್ 2021 ರಿಂದ ಪಾವತಿಸಬೇಕಾದ ಮಾಹೆಯಾನ ರೂ, 3,000/–ಗಳನ್ನು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವವರೆಗೆ ಬಾಕಿ ಸಹಿತ ಬಿಡುಗಡೆ ಮಾಡಬೇಕೆಂದು ಸಭೆ ಸೂಚಿಸಿತು. ಟೆಂಡರ್ ಪ್ರಕ್ರಿಯೆ ಆದಷ್ಟು ಬೇಗ ಪೂರ್ಣಗೊಳಿಸಲು ಸೂಚನೆ ನೀಡಲಾಯಿತು.**

**ವಿಷಯ ಸಂಖ್ಯೆ 3:** ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮಂಡಳಿಗಳನ್ನು ಪುನರ್ ರಚಿಸುವ ಕುರಿತು

ವಿಷಯದ ಕುರಿತು ಚರ್ಚೆಯನ್ನು ಆರಂಭಿಸಿದ ಮಾನ್ಯ ಸದಸ್ಯರಾದ ಡಾ: ಆರ್.ಕೆ. ಚಂದ್ರನಾಥ್‌ರವರು ಸಸ್ಯಶಾಸ್ತ್ರ(ಸ್ನಾತಕ) ವಿಷಯದಲ್ಲಿ ಶ್ರೀಮತಿ ಸುಧಾ ಶಾಂಡಿಲ್ಯ ಮತ್ತು ಭೌತಶಾಸ್ತ್ರ ವಿಷಯದ ಡಾ: ಅನುರಾಧಾರವರು ಸ್ವಯಂ ನಿವೃತ್ತಿ ಹೊಂದಿದ್ದು ಅವರ ಸ್ಥಾನಕ್ಕೆ ಬೇರೆಯವರನ್ನು ನೇಮಕ ಮಾಡಬೇಕೆಂದು ತಿಳಿಸಿದರು. ರಸಾಯನಶಾಸ್ತ್ರ ವಿಭಾಗದ ಶ್ರೀಮತಿ ಸರ್ವಮಂಗಳ ಎಂ. ಅವರು ಪಿ.ಪಿ.ಎಸ್. ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದು ಅದನ್ನು ತಿದ್ದುಪಡಿ ಮಾಡಲು ಸೂಚಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯರವರು BHMಗೆ ಸಂಬಂಧಿಸಿದ ಅಧ್ಯಯನ ಮಂಡಳಿಯ BHM ವಿಷಯದ ಪರಿಣಿತರನ್ನು ಸೇರಿಸಬೇಕೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ವಿ. ಗಾಯತ್ರಿಯವರು ರಸಾಯನಶಾಸ್ತ್ರ (ಸ್ನಾತಕ) ವಿಷಯದಲ್ಲಿ ಡಾ. ಗ್ರೇಸ್ ಥಾಮಸ್ ಅವರು ನಿವೃತ್ತರಾಗಿರುವುದರಿಂದ ಅವರ ಸ್ಥಾನಕ್ಕೆ ಬೇರೊಬ್ಬರನ್ನು ನಾಮಕರಣ ಮಾಡಲು ಸೂಚಿಸಿದರು.

ಮಾನ್ಯ ಸದಸ್ಯರಾದ ಪ್ರೊ: ಕೆ. ರಮೇಶ್‌ರವರು ಶಿಕ್ಷಣ ನಿಕಾಯಕ್ಕೆ ಬೇರೆ ವಿಷಯದ ಪ್ರಾಧ್ಯಾಪಕರನ್ನು ಡೀನರಾಗಿ ನಾಮಕರಣ ಮಾಡಲಾಗಿದೆ. ಶಿಕ್ಷಣ ನಿಕಾಯದ ಮಹಾವಿದ್ಯಾಲಯಗಳ ಪ್ರಾಂಶುಪಾಲರನ್ನು ಡೀನರಾಗಿ ನಾಮಕರಣ ಮಾಡುವುದನ್ನು ಪರಿಗಣಿಸಬೇಕೆಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

**ಅ) ಪ್ರಸ್ತಾಪಿತ 59 ಅಧ್ಯಯನ ಮಂಡಳಿಗಳ ರಚನೆಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.**

**ಆ) ನಿವೃತ್ತಿ, ವರ್ಗಾವಣೆ ಮುಂತಾದ ಕಾರಣಗಳಿಂದ ಖಾಲಿ ಆಗುವ ಸ್ಥಾನಗಳಿಗೆ ಅಗತ್ಯ ಬದಲಾವಣೆಗಳನ್ನು ಕುಲಪತಿಗಳು ಮಾಡಬಹುದೆಂದು ತೀರ್ಮಾನಿಸಲಾಯಿತು.**

ಇ) ಹೊಸದಾಗಿ ಪ್ರಾರಂಭಿಸಬೇಕಾದ ಸ್ನಾತಕೋತ್ತರ ವಿಭಾಗಳಾದ 1) Environment and Social Change 2) Technology 3) Arts and Aesthetics 4) Urban Studies and Planning 5) Law and Public Policy Adhoc ಅಧ್ಯಯನ ಮಂಡಳಿಗಳನ್ನು ರಚಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ನಿರ್ಣಯಿಸಲಾಯಿತು.

ಈ) ಶಿಕ್ಷಣ ನಿಕಾಯದ ಡೀನರನ್ನು ನಿಯಮಾವಳಿಗಳ ಪ್ರಕಾರ ನಾಮಕರಣ ಮಾಡುವ ಕುರಿತು ಕ್ರಮ ವಹಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 4: 2021–22ನೇ ಶೈಕ್ಷಣಿಕ ಸಾಲಿಗೆ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಬಗ್ಗೆ

ಸಿಂಡಿಕೇಟ್ ನಿರ್ಣಯ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮಹಾವಿದ್ಯಾಲಯಗಳಿಗೆ **2021–22** ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ನಾಮಕರಣ ಮಾಡಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ಅನುಮೋದಿಸಲಾಯಿತು.

ವಿಷಯ ಸಂಖ್ಯೆ 5: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020–21ನೇ ಶೈಕ್ಷಣಿಕ ಸಾಲಿನ ಪರೀಕ್ಷೆಗಳನ್ನು UGC ನಿರ್ದೇಶನದ ಮತ್ತು ಕರ್ನಾಟಕ ಸರ್ಕಾರದ ಆದೇಶಗಳನ್ವಯ ನಡೆಸುವ ಕುರಿತು.

ಸಿಂಡಿಕೇಟ್ ನಿರ್ಣಯ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಮಧ್ಯಾಂತರ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಪ್ರಕ್ರಿಯೆಗಳನ್ನು ಈ ಸಂಬಂಧ ರಚಿಸಿದ ಸಮಿತಿಯು ದಿನಾಂಕ **25.08.2020** ರಂದು ಸಲ್ಲಿಸಿರುವ ಮಾನದಂಡಗಳನ್ನು ಕಳೆದ ವರ್ಷ ಅಳವಡಿಸಿಕೊಂಡಿರುವಂತೆ ಪ್ರಸ್ತುತ ವರ್ಷದಲ್ಲಿಯೂ ಅಳವಡಿಸಿಕೊಂಡು ಫಲಿತಾಂಶದ ಪ್ರಕ್ರಿಯೆಗಳನ್ನು ನಡೆಸಲು ಸಭೆಯು ಅನುಮೋದಿಸಿತು.

ವಿಷಯ ಸಂಖ್ಯೆ 6: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅರ್ಹ ಸಂಯೋಜಿತ ಕಾಲೇಜುಗಳನ್ನು ಸಂಶೋಧನಾ ಕೇಂದ್ರಗಳನ್ನಾಗಿ ಮಾನ್ಯತೆ ನೀಡಲು ಅಗತ್ಯ ಪ್ರಕ್ರಿಯೆಗಳನ್ನು ಕೈಗೊಳ್ಳುವ ಕುರಿತು.

ಸಿಂಡಿಕೇಟ್ ನಿರ್ಣಯ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅರ್ಹ ಮಹಾವಿದ್ಯಾಲಯಗಳಿಗೆ ಸಂಶೋಧನಾ ಕೇಂದ್ರಗಳಾಗಿ ಮಾನ್ಯತೆ ನೀಡುವ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು ಮತ್ತು ಸಂಶೋದನೆಗಳಿಗೆ ಒತ್ತುಕೊಡುವ ಕುಲಪತಿಗಳ ವಿಶೇಷ ಆಸಕ್ತಿಗೆ ಸಿಂಡಿಕೇಟ್ ಸಭೆ ಅಭಿನಂದನೆಗಳನ್ನು ಸಲ್ಲಿಸಿತು.

ವಿಷಯ ಸಂಖ್ಯೆ 7: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದ (Academic Section) ಮತ್ತು ಹಣಕಾಸು ವಿಭಾಗದ (Finance Section) ಆಡಳಿತಾತ್ಮಕ ಸುಧಾರಣೆಯ ದೃಷ್ಟಿಯಿಂದ ಪ್ರಕ್ರಿಯೆಗಳ ಗಣಕೀಕರಣ ಸೇವೆಯನ್ನು ಪಡೆದುಕೊಳ್ಳುವ ಕುರಿತು

ಸಿಂಡಿಕೇಟ್ ನಿರ್ಣಯ:

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದ (Academic Section) ಮತ್ತು ಹಣಕಾಸು ವಿಭಾಗದ (Finance Section) ಆಡಳಿತಾತ್ಮಕ ಸುಧಾರಣೆಯ ದೃಷ್ಟಿಯಿಂದ ಡಿಟಿಟಲ್ ಪ್ರಕ್ರಿಯೆಗಳಿಗೆ ಒಳಪಡಿಸಿ ಪ್ರತ್ಯೇಕವಾದ ಸಾಫ್ಟ್‌ವೇರ್ ಆಧಾರಿತ ಸೇವೆಗಳನ್ನು ಸರ್ಕಾರದಿಂದ 4(ಜಿ) ವಿನಾಯಿತಿ ಪಡೆದಿರುವ ಸಂಸ್ಥೆಯಿಂದ ಪಡೆದುಕೊಳ್ಳಲು ಸಭೆ ಅನುಮೋದನೆ ನೀಡಿತು. ಈ ಆಡಳಿತಾತ್ಮಕ ಸುಧಾರಣೆಗಳು ವಿಶ್ವವಿದ್ಯಾನಿಲಯಕ್ಕೆ ಅತ್ಯಂತ ಅಗತ್ಯವಾಗಿರುವುದರಿಂದ ಕುಲಪತಿಗಳ ವಿಶೇಷ ಪ್ರಯತ್ನಕ್ಕೆ ಸಭೆ ಅಭಿನಂದಿಸಿತು.**

ವಿಷಯ ಸಂಖ್ಯೆ 8: ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ –2000, ಅನುಚ್ಛೇದ 66(1)ರ ಅಡಿಯಲ್ಲಿ ವಿಶೇಷ ಅಧ್ಯಯನಗಳನ್ನು ನಡೆಸುವ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಕುರಿತು

ಸಿಂಡಿಕೇಟ್ ನಿರ್ಣಯ:

**ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಅನುಚ್ಛೇದ 66(1) ರ ಅಡಿಯಲ್ಲಿ ವಿಶೇಷ ಅಧ್ಯಯನ/ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಸರ್ಕಾರಿ/ಖಾಸಗಿ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಸಲುವಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಅನುಮೋದಿತ "Recognition of Certain Institutions for Specialized Studies/Specialized Studies and Research Studies Statutes 2018" ಪರಿನಿಯಮಗಳನ್ನು, ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು, ಈ ಕುರಿತಂತೆ ಅರ್ಹ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಭೆ ನಿರ್ಣಯಿಸಿತು.**

ವಿಷಯ ಸಂಖ್ಯೆ 9: ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ, ಎಂ.ಎಸ್ಸಿ. ಬಯೋಟೆಕ್ನಾಲಜಿ ಕೋರ್ಸಿನಲ್ಲಿ ಒಬ್ಬ ವಿದ್ಯಾರ್ಥಿಯನ್ನು ಹೆಚ್ಚುವರಿಯಾಗಿ ಪ್ರವೇಶ ನೀಡಿರುವುದರ ಬಗ್ಗೆ.

ಸದಸ್ಯರಾದ ಡಾ. ವಿ. ಆರ್. ದೇವರಾಜ್, ಶ್ರೀ ಟಿ. ಹೆಚ್ ಶ್ರೀನಿವಾಸ್ಯಯ, ಡಾ. ಆರ್. ಕೆ. ಚಂದ್ರನಾಥ್, ಡಾ ಲಿಡಿಯಾ ಪಿ ಸಾಮ್ಯುಯೆಲ್, ಪ್ರೋ. ಕೆ. ರಮೇಶ್, ಡಾ ಪಿ. ವಿ. ಪದ್ಮಜಾ, ಶ್ರೀ ಹೆಚ್. ಎನ್. ಹರಿಪ್ರಸಾದ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡು ಪ್ರವೇಶ ಸಂಖ್ಯೆಗಿಂತ ಹೆಚ್ಚುವರಿ ಪ್ರವೇಶ ನೀಡಿ ಮಹಾವಿದ್ಯಾಲಯ ತಪ್ಪು ಮಾಡಿದೆ. ಇದಕ್ಕಾಗಿ ಮಹಾವಿದ್ಯಾಲಯಕ್ಕೆ ಸೂಕ್ತ ದಂಡ ವಿಧಿಸಬೇಕೆಂದು ಅಭಿಪ್ರಾಯ ಪಟ್ಟರು. ವಿದ್ಯಾರ್ಥಿಯ ಹಿತದೃಷ್ಟಿಯಿಂದ ಒಂದು ಹೆಚ್ಚುವರಿ ಪ್ರವೇಶಕ್ಕೆ ಅನುಮೋದನೆ ನೀಡಬೇಕೆಂದು ಅಭಿಪ್ರಾಯ ಪಟ್ಟರು. ಕುಲಪತಿಗಳು, ವೃತ್ತಿಪರ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ ಪ್ರವೇಶ ಸಂಖ್ಯೆ ನಿಗಧಿಪಡಿಸುವ ಅಂತಿಮ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎಂದು ಹೇಳಿದರು.

ಸಿಂಡಿಕೇಟ್ ನಿರ್ಣಯ

ಎಂ. ಎಸ್. ರಾಮಯ್ಯ ಕಾಲೇಜಿನ ಎಂ.ಎಸ್ಸಿ. ಬಯೋಟೆಕ್ನಾಲಜಿ ಕೋರ್ಸಿಗೆ ಪ್ರವೇಶ ನೀಡಲಾದ ಒಂದು ಹೆಚ್ಚುವರಿ ಪ್ರವೇಶವನ್ನು, ವಿದ್ಯಾರ್ಥಿಯ ಹಿತದೃಷ್ಠಿಯಿಂದ ಮಾನ್ಯ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮತ್ತು ಮುಂದಿನ ವರ್ಷದ ಪ್ರವೇಶ ಸಂಖ್ಯೆಯಲ್ಲಿ ಒಂದು ಸಂಖ್ಯೆಯನ್ನು ಕಡಿಮೆಗೊಳಿಸಿ, 45ರ ಬದಲಿಗೆ 44ಕ್ಕೆ ಸೀಮಿತಗೊಳಿಸಲು ಸಭೆ ತೀರ್ಮಾನಿಸಿತು.

ಮಹಾವಿದ್ಯಾಲಯಕ್ಕೆ ಸೂಕ್ತ ದಂಡವನ್ನು ಕುಲಪತಿಗಳು ವಿಧಿಸಬೇಕೆಂದು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ 10: ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡು ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಎಂ ರಾಮಚಂದ್ರಗೌಡ ಪ್ರಾಧ್ಯಾಪಕರು ವಾಣಿಜ್ಯ ವಿಭಾಗ ಇವರನ್ನು ಮಾತೃ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಿ ಬಿಡುಗಡೆ ಮಾಡಿರುವ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ಡಾ. ಎಂ ರಾಮಚಂದ್ರಗೌಡ ಪ್ರಾಧ್ಯಾಪಕರು ವಾಣಿಜ್ಯ ವಿಭಾಗ ಇವರನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮರುವರ್ಗಾವಣೆ ಮಾಡಿರುವ ಹಾಗೂ ಅವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ದಿನಾಂಕ 30.6.2021 ರಂದು ಬಿಡುಗಡೆ ಮಾಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.

ವಿಷಯ ಸಂಖ್ಯೆ11: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಆರ್.ವಿ. ಶಿಕ್ಷಣ ಮಹಾವಿದ್ಯಾಲಯದ ಸಂಶೋಧನಾ ಕೇಂದ್ರದ ಮಾನ್ಯತೆ ಮುಂದುವರಿಸುವ ಕುರಿತು ನಿವೃತ್ತ ಕುಲಪತಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿ ಸಲ್ಲಿಸಿರುವ ವರದಿಯನ್ನು ಪರಿಗಣಿಸುವ ಬಗ್ಗೆ.

ಸಿಂಡಿಕೇಟ್ ನಿರ್ಣಯ

ಆರ್.ವಿ.ಶಿಕ್ಷಣ ಮಹಾವಿದ್ಯಾಲಯ ಸಂಶೋಧನಾ ಕೇಂದ್ರದ ಮಾನ್ಯತೆ ಮುಂದುವರಿಸುವ ಕುರಿತು ನಿವೃತ್ತ ಕುಲಪತಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿ ಸಲ್ಲಿಸಿರುವ ವರದಿಯನ್ನು ಪರಿಗಣಿಸಿ ಸದರಿ ಮಹಾವಿದ್ಯಾಲಯದ, ಶಿಕ್ಷಣ ಸ್ನಾತಕೋತ್ತರ ವಿಭಾಗಕ್ಕೆ ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಣಕ್ಕೆ ಅನುಮೋದನೆ ನೀಡಲು ತೀರ್ಮಾನಿಸಲಾಯಿತು

ವಿಷಯ ಸಂಖ್ಯೆ 12: ಸರ್ಕಾರ ಅನುಮತಿಸಿರುವ ಐದು ಹೊಸ ಸ್ನಾತಕೋತ್ತರ ವಿಭಾಗಗಳಿಗೆ ಹಾಗೂ ಪ್ರಸ್ತುತ ಇರುವ ವಿಭಾಗಗಳಿಗೆ ವಿಶ್ವವಿದ್ಯಾನಿಲಯದ ಪೂರ್ಣಾವಧಿ ಅಧ್ಯಾಪಕರಿಗೆ ಪ್ರಭಾರ ಮುಖ್ಯಸ್ಥರ ಕಾರ್ಯವನ್ನು ವಹಿಸಿಕೊಡುವ ಕುರಿತು.

ಸಿಂಡಿಕೇಟ್ ನಿರ್ಣಯ:

ಅ) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿಜ್ಞಾನ, ವಾಣಿಜ್ಯ ಮತ್ತು ಕಲಾ ನಿಖಾಯಗಳ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ– 2020 ರ ಆಶೋತ್ತರಗಳನ್ನು ಜಾರಿಗೊಳಿಸುವ ಉದ್ದೇಶದಿಂದ ದಕ್ಷತೆ, ಗುಣಾತ್ಮಕ ಶಿಕ್ಷಣ, ಮತ್ತು ಸ್ಪರ್ಧಾತ್ಮಕತೆಗೆ ಹೆಚ್ಚು ಗಮನ ಹರಿಸಬೇಕಾಗಿರುವುದರಿಂದ, ದಿನಾಂಕ 19.10.2019 ರಂದು ಜರುಗಿದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಪರಿಷ್ಕರಿಸಿ, ಪ್ರಸ್ತುತ ಡೀನರು ಮುಖ್ಯಸ್ಥರಾಗಿರುವ ವಿಭಾಗಗಳ ಮುಖ್ಯಸ್ಥರ ಪ್ರಭಾರವನ್ನು ವಿವಿಧ ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೂರ್ಣಾವಧಿ ಪ್ರಾಧ್ಯಾಪಕರು / ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುಗಳಿಗೆ ವಿಭಾಗಗಳ ಮುಖ್ಯಸ್ಥರ ಜವಾಬ್ದಾರಿ ವಹಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು. ಅದರಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪೂರ್ಣಾವಧಿ ಪ್ರಾಧ್ಯಾಪಕರು / ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರುಗಳಿಗೆ ಮತ್ತು ವಿಶ್ವವಿದ್ಯಾನಿಲಯದ ಅಧಿಕಾರಿಗಳಾದ ಕುಲಸಚಿವರು ಹಾಗೂ ಕುಲಸಚಿವರು (ಮೌಲ್ಯಮಾಪನ) ರವರಿಗೆ ಹೆಚ್ಚುವರಿಯಾಗಿ ವಿಭಾಗಗಳ ಮುಖ್ಯಸ್ಥರ ಜವಾಬ್ದಾರಿಯನ್ನು ವಹಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

ಆ) ಹೊಸದಾಗಿ ಪ್ರಾರಂಭಿಸಬೇಕಾದ ಐದು ಸ್ನಾತಕೋತ್ತರ ವಿಭಾಗಗಳ ಪೂರ್ವಸಿದ್ಧತೆ, ಪಠ್ಯಕ್ರಮ ರಚನೆ, ಮುಂತಾದ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಸಂಯೋಜಕರನ್ನು ನೇಮಕ ಮಾಡಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಇ) ಹೊಸ ಸ್ನಾತಕೋತ್ತರ ವಿಭಾಗಗಳ ಪ್ರಾರಂಭಕ್ಕೆ ಅಗತ್ಯ ಮೂಲಭೂತ ಸೌಲಭ್ಯ ಹಾಗೂ ಸೌಕರ್ಯಗಳನ್ನು ಒದಗಿಸಲು ಕೂಡಲೇ ಕಾರ್ಯತತ್ಪರರಾಗಬೇಕೆಂದು ಸಭೆ ತೀರ್ಮಾನಿಸಿತು.

ಈ) ಹೊಸ ಸ್ನಾತಕೋತ್ತರ ವಿಭಾಗಗಳು ವಿದ್ಯಾರ್ಥಿಗಳ ಪ್ರವೇಶ ಪಡೆಯಲು ಆಕರ್ಷಕ ಹಾಗೂ ಪ್ರಸ್ತುತ ಸಂದರ್ಭದ ಅಗತ್ಯಗಳಿಗೆ ಪೂರಕವಾಗಿರುವುದರಿಂದ ಇವುಗಳಿಗಾಗಿ ಅನುಭವಿ ಶಿಕ್ಷಕರನ್ನು ಗುರುತಿಸಲು ಹಾಗೂ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳಿಗೆ ಇವುಗಳ ಉಪಯುಕ್ತತೆ ಮತ್ತು ಅಗತ್ಯದ ಕುರಿತು ಮಾಹಿತಿಯನ್ನು ಜಾಹಿರಾತು ಮೂಲಕ ನೀಡಲು ಸಭೆ ಒಪ್ಪಿಗೆ ನೀಡಿತು.

ವಿಷಯ ಸಂಖ್ಯೆ 13: ಕುಲಪತಿಗಳಿಗೆ ವಸತಿ ಸೌಕರ್ಯ ಒದಗಿಸುವ ಕುರಿತು.

ಸಿಂಡಿಕೇಟ್ ನಿರ್ಣಯ:

ಕುಲಪತಿಗಳಿಗೆ ವಸತಿ ಸೌಕರ್ಯ ಒದಗಿಸುವ ಕುರಿತು ವಿಶ್ವವಿದ್ಯಾನಿಲಯ ಕೈಗೊಂಡ ಕ್ರಮಗಳಿಗೆ ಸಹಮತ ವ್ಯಕ್ತಪಡಿಸಿ ಅನುಮೋದನೆ ನೀಡಲಾಯಿತು. ಒಟ್ಟು ರೂ.90,000/-ಗಳ ಬಾಡಿಗೆ ಮೊತ್ತದಲ್ಲಿ ಕುಲಪತಿಗಳಿಗೆ ಪಾವತಿಸಬೇಕಾದ ಮನೆಬಾಡಿಗೆ ಭತ್ಯೆ ರೂ.50,400/-ಗಳಿಗೆ ರೂ. 39600/-ಗಳನ್ನು ವಿಶ್ವವಿದ್ಯಾಲಯದಿಂದ ಭರಿಸಲು ಒಪ್ಪಿಗೆ ನೀಡಲಾಯಿತು.

ಇತರೆ ವಿಷಯಗಳು:

1) ವಾಣಿಜ್ಯ ಸ್ನಾತಕೋತ್ತರ ವಿಭಾಗವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವ ಕುರಿತು ಕೆಲವು ಸದಸ್ಯರು ಪ್ರಸ್ತಾಪಿಸಿದಾಗ, ಆ ಕಟ್ಟಡಕ್ಕೆ ಅಗತ್ಯವಾದ ಪೀಠೋಪಕರಣಗಳನ್ನು ಖರೀದಿಸಬೇಕಾಗಿದೆ ಎಂದು ಕಲಸಚಿವರು ತಿಳಿಸಿದರು.

ಸಿಂಡಿಕೇಟ್ ನಿರ್ಣಯ:

ತುರ್ತಾಗಿ ವಾಣಿಜ್ಯ ವಿಭಾಗ ಒಳಗೊಂಡಂತೆ ಎಲ್ಲಾ ವಿಭಾಗಗಳು ಹಾಗೂ ಕಛೇರಿಗಳಿಗೆ ಬೇಕಾದ ಪೀಠೋಪಕರಣಗಳನ್ನು ಕೇಂದ್ರೀಯ ಖರೀದಿ ಸಮಿತಿ ಅನುಮೋದನೆ ಪಡೆದು 4ಜಿ ವಿನಾಯಿತಿ ಇರುವ ಸಂಸ್ಥೆಗಳಿಂದ ಆದ್ಯತೆಯ ಮೇಲೆ ಖರೀದಿಸಬೇಕೆಂದು, ನಂತರ ಕೈಗೊಂಡ ಕ್ರಮದ ಘಟನೋತ್ತರ ಅನುಮೋದನೆಗೆ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ಸಭೆ ತೀರ್ಮಾನಿಸಿತು.

2) ಡಾ: ಕೆ.ಆರ್. ಚಂದ್ರನಾಥ್‌ರವರು ವಿಶ್ವವಿದ್ಯಾನಿಲಯದ ಯಾವುದೇ ಅಧಿಕಾರಿಗಳ ನಿವೃತ್ತಿ ವರ್ಗಾವಣೆ ಇತ್ಯಾದಿ ಕಾರಣಕ್ಕಾಗಿ ಆಯೋಜಿಸುವ ಬೀಳ್ಕೊಡುಗೆ ಸಮಾರಂಭಕ್ಕೆ ಸಿಂಡಿಕೇಟ್ ಸದಸ್ಯರನ್ನು ಅಹ್ವಾನಿಸಬೇಕೆಂದು ಪ್ರಸ್ತಾಪಿಸಿದರು. ಕುಲಪತಿಗಳು ಇದಕ್ಕೆ ಸಮ್ಮತಿ ಸೂಚಿಸಿದರು.

3) ಪ್ರೋ. ಕೆ. ರಮೇಶ್‌ರವರು ವಿಶ್ವವಿದ್ಯಾನಿಲಯದ ಕ್ರೀಡಾ ವಿಭಾಗದ ಹಣಕಾಸು ನಿರ್ವಹಣೆಗೆ ಡಾ: ಮುನಿನಾರಾಯಣಪ್ಪ ಅವರನ್ನು ಪ್ರಭಾರ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ಇದರಿಂದಾಗಿ ದೈನಂದಿನ ಕ್ರೀಡಾ ಚಟುವಟಿಕೆಗಳನ್ನು ಜರುಗಿಸಲು ತೊಂದರೆಯಾಗುತ್ತಿದೆ, ಕಾರಣ ಅವರನ್ನು ಡ್ರಾಯಿಂಗ್ ಆಫಿಸರ್ ಆಗಿ ಪರಿಗಣಿಸಿ ಆರ್ಥಿಕ ನಿರ್ವಹಣೆಯನ್ನು ಮಾತ್ರ ನೋಡಿಕೊಳ್ಳಲು ಸೂಚಿಸಬೇಕು. ಕ್ರೀಡೆಗಳಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಶ್ರೀ ಇಲಿಯಾಸ್‌ರವರು ನೋಡಿಕೊಳ್ಳಲು ಆದೇಶಿಸಬೇಕೆಂದು ಪ್ರಸ್ತಾಪಿಸಿದರು. ಅಧ್ಯಕ್ಷರು ಈ ಕುರಿತು ಇಬ್ಬರನ್ನು ಕರೆಸಿ ಮಾತನಾಡಿ ಸಮಸ್ಯೆ ಇತ್ಯರ್ಥಗೊಳಿಸುವುದಾಗಿ ತಿಳಿಸಿದರು. ಅಗತ್ಯವಾದಲ್ಲಿ ಕುಲಸಚಿವರನ್ನು ಪ್ರಭಾರ ದೈಹಿಕ ಶಿಕ್ಷಣ ನಿರ್ದೇಶಕರಾಗಿ ನೇಮಕ ಮಾಡಲು ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

4) ಪ್ರೋ. ಕೆ. ರಮೇಶ್‌ರವರು ಕೇಳಿದ ಚರಣ್ ಬಿ.ಎಡ್. ಕಾಲೇಜಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡಲಾಯಿತು.

5) ಡಾ. ವಿ. ಆರ್. ದೇವರಾಜ್‌ರವರು ವಿಶ್ವವಿದ್ಯಾನಿಲಯದಲ್ಲಿ ಅಗತ್ಯವಾಗಿ ನಿರ್ವಹಿಸಬೇಕಾದ ಸಣ್ಣ ಪುಟ್ಟ ರಿಪೇರಿ ಕೆಲಸಗಳಿಗೆ ಅಭಿಯಂತರ ವಿಭಾಗದಲ್ಲಿ ಸಾದಿಲ್ವಾರು ಮುಂಗಡ ಹಣ ಇಲ್ಲದಿರುವುದರಿಂದ ರಿಪೇರಿ ಕೆಲಸಗಳು ವಿಳಂಬವಾಗುತ್ತಿವೆ. ಕಾರಣ ಇಂಜಿನಿಯರಿಂಗ್ ವಿಭಾಗಕ್ಕೆ ಅಗತ್ಯವಾದ ಕನಿಷ್ಠ ರೂ.50,000/-ಗಳನ್ನು ಮುಂಗಡವಾಗಿ ಮಂಜೂರು ಮಾಡಬೇಕೆಂದು ತಿಳಿಸಿದರು. ಕುಲಸಚಿವರು ಈ ಕುರಿತು ಮಾಹಿತಿ ನೀಡಿ, ರಿಪೇರಿ ಕೆಲಸಗಳಿಗಾಗಿ ಅಗತ್ಯವಾದ ಬಿಡಿಭಾಗಗಳ ದರಗಳನ್ನು ಗಮನಿಸಿ ಕನಿಷ್ಠ ಒಂದು ಲಕ್ಷ ರೂಪಾಯಿಗಳ ಸಾದಿಲ್ವಾರು ಮುಂಗಡ ನೀಡುವುದು ಅಗತ್ಯವಾಗಿದೆ ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

**ವಿಶ್ವವಿದ್ಯಾನಿಲಯದ ವಿಭಾಗಗಳ ಅಗತ್ಯವಾದ ರಿಪೇರಿ ಕೆಲಸಗಳಿಗಾಗಿ ಒಂದು ಲಕ್ಷ ರೂಪಾಯಿಗಳನ್ನು ಕುಲಸಚಿವರಿಗೆ ಸಾದಿಲ್ವಾರು ರೂಪದಲ್ಲಿ ಮುಂಗಡ ಹಣ ಪಾವತಿಸಲು ಸಭೆ ಅನುಮೋದನೆ ನೀಡಿತು.**

ಕುಲಸಚಿವರು (ಮೌಲ್ಯಮಾಪನ) ರವರ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು
ಸಭಾಧ್ಯಕ್ಷರು